**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.686/2014**

ಪಿ.ಡಬ್ಲ್ಯೂ: 13

ಸಿ.ಡಬ್ಲ್ಯೂ: 15

ಸಾಕ್ಷಿದಾರರ ಹೆಸರು : ರಾಜೇಶ್

ತಂದೆಯ ಹೆಸರು : ನಾಗರಾಜ್ ಶೆಟ್ಟಿ

ವಯಸ್ಸು : 52 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬಾವಿಕೆರೆ

**ದಿನಾಂಕ: 29-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

2013-14ನೇ ಸಾಲಿನಲ್ಲಿ ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ಪಂಚಾಯಿತಿಯಿಂದ ದಾಖಲೆಗಳನ್ನು ಚಾಸಾ-14ರವರು ಹಾಜರುಪಡಿಸಿದ್ದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ಮಹಜರ್ ಮಾಡಿದ್ದು, ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಆ ಸಮಯದಲ್ಲಿ ಚಾಸಾ-14 ಮತ್ತು 16 ರವರು ಹಾಜರಿದ್ದರು. ಪೊಲೀಸರು ಅಸಸ್ ಮೆಂಟ್ ಪುಸ್ತಕವನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ.**

ನಾನು ಗ್ರಾಮ ಪಂಚಾಯಿತಿ ಸದಸ್ಯ ಎಂದೂ ಆಗಿಲ್ಲ. ಚುನಾವಣೆಗೆ ನಿಂತಿಲ್ಲ. ನನಗೆ ಆರೋಪಿಗಳ ಜೊತೆ ಅನ್ಯೋನ್ಯತೆ ಇಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿತರಿಗೂ ರಾಜಕೀಯ ವೈಷಮ್ಯ ಇದೆ ಎಂದರೆ ಸರಿಯಲ್ಲ. ವಸಂತ್ ಕುಮಾರ್ ಶೆಟ್ಟಿ ಹಾಗೂ ನಮಗೂ ಸಂಬಂಧ ಸರಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ದಿ: 19-03-2014 ರಲ್ಲಿ ನನಗೆ ನೋಟೀಸು ನೀಡಿದ್ದರು. ನನ್ನ ಜೊತೆ ಬೇರೆ ಯಾರಿಗೆ ನೋಟೀಸ್ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಬಾವಿಕೆರೆ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂದರೆ ಸರಿ. ಹಿಂದೆ 1 ನೇ ಆರೋಪಿ ಅಧ್ಯಕ್ಷ ಆಗಿದ್ದರು ಎಂದರೆ ಸರಿ. ಸಂಘದಲ್ಲಿ ಅವ್ಯವಹಾರ ಆಗಿರುವ ಬಗ್ಗೆ ಆರೋಪಿ ಸೀತರಾಮ್ ರವರು ನನ್ನ ವಿರುದ್ದ ಪೊಲೀಸ್ ದೂರು ನೀಡಿದ್ದರು ಎಂದರೆ ಸರಿ. ಪೊಲೀಸರು ನನಗೆ ಯಾವುದೇ ನೋಟೀಸ್

ನೀಡಿಲ್ಲ ಹಾಗೂ ಮಹಜರಿಗೆ ಕರೆದಿಲ್ಲ ಎಂದರೆ ಸರಿಯಲ್ಲ. ನಾನೇ ಖುದ್ದಾಗಿ ನನ್ನ ಹೆಸರನ್ನು ಬರೆಸಿ ಪೊಲೀಸರ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ನ್ನು ನಾನು ಓದಿದ್ದೇನೆ ಆದರೆ ಈಗ ನೆನಪಿಲ್ಲ. ಮಹಜರ್ ಸಮಯದಲ್ಲಿ ಒಂದು ಅಸಸ್ ಮೆಂಟ್ ಎಕ್ಸಟ್ರಾಕ್ಟ ಇತ್ತು. ಅಸಸ್ ಮೆಂಟ್ ಪುಸ್ತಕದ ನಂಬರ್ ನ್ನು ನಾನು ಗಮನಿಸಿರುವುದಿಲ್ಲ. ಅಮಾನತ್ತು ಸಮಯದಲ್ಲಿ ಪೋಟೋ ತೆಗೆದಿಲ್ಲ. ನನಗೂ ಆರೋಪಿತರಿಗೂ ವೈಯಕ್ತಿಕ ದ್ವೇಷ ಇದೆ ಎಂದರೆ ಸರಿಯಲ್ಲ. ಸಭಾ ನಡವಳಿಕೆ ಪುಸ್ತಕವನ್ನು ನಾನು ನ್ಯಾಯಾಲಯದಲ್ಲಿ ನೋಡಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***